ಎನ್. ಮಂಜುನಾಥ, ಬೆಂಗಳೂರು

*ಸ್ಮಶಾನದಲ್ಲಿ ಗೋರಿಯ ಮೇಲೆ 'ನೀನು ದೇವರ ಪಾಲು' ಎಂದು ಬರೆದಿದೆಯಲ್ಲಾ ರಾಮಣ್ಣ?*




ನಿಜ. ಮನುಜರ ಶವ ಮಾತ್ರ ದೇವರ ಪಾಲು; ಪ್ರಾಣಿಗಳ ಶವ ಯಾವುದೋ ನಾನ್ ವೆಜಿಟೇರಿಯನ್‌ನ ಪಾಲು!

ಆರತಿ ಘಟಿಕಾರ್, ದುಬೈ

*ಸತ್ಯಕ್ಕೆ ಸಾವಿಲ್ಲ ನಿಜ. ಆದರೆ ಸುಳ್ಳು ವೆಂಟಿಲೇಟರ್‌ನಲ್ಲೇ ದೀರ್ಘಕಾಲ ಬಾಳುವುದಲ್ಲಾ...?*

ಅಷ್ಟೇ ಆದರೆ ಚೆನ್ನಿತ್ತು; ಈಗ ಸುಳ್ಳ ಕಡಲೊಳು ತೇಲಿ ಬರುತಿದೆ ನಿಜದ ಹಾಯಿದೋಣಿ.

ಆರ್. ಮಧುಸೂದನ್, ಹಾಸನ

*ಚಾಪೆ ಕೆಳಗೆ ತೂರಬಹುದು; ರಂಗೋಲಿಯ ಕೆಳಗೆ ತೂರುವುದಕ್ಕೆ ಹೇಗೆ ಸಾಧ್ಯ ಸಾರ್?*

ಬಹಳ ಸುಲಭ; ರಂಗೋಲಿ ಹಾಕಿರುವ ಪ್ರದೇಶದ ಕೆಳಗೆ ಸುರಂಗ ತೋಡಿದರಾಯ್ತು!

ಡಾ.ವಿ. ಪುಗಳೇಂದಿ, ಬಳ್ಳಾರಿ

*ಒಂದೆಡೆ ಮಡೆಸ್ನಾನ; ಇನ್ನೊಂದೆಡೆ ಮಂಗಳಯಾನ. ದೇಶದ ಅಭಿವೃದ್ಧಿಯಲ್ಲಿ ಏರು ಪೇರು ಯಾಕಣ್ಣ?*



ಅದು ಏರುಪೇರಲ್ಲ, ವೈಶಿಷ್ಟ್ಯ. ಮೂಢನಂಬಿಕೆಯ ವಿರುದ್ಧ ಮಾತನಾಡಲು ರಾಹುಕಾಲ ನೋಡಿ ಹೊರಡುವುದು ನಮ್ಮ ಕ್ರಮ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಶ್ರೀಶ್ರೀಗಳೆನಿಸಿಕೊಂಡವರು ಈ ದೇಶದ ಕಾನೂನಿಗಿಂತಲೂ ದೊಡ್ಡವರೇ ರಾಂ?*

ಛೀಛೀ ಎನಿಸಿಕೊಳ್ಳುವವರೇ ಹಾಗೆ ನಡೆದುಕೊಳ್ಳುವಾಗ ಶ್ರೀಶ್ರೀ ಎನಿಸಿಕೊಂಡವರು ಆದರೆ ತಪ್ಪಿಲ್ಲ!

ಟಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

*ದೇವಸ್ಥಾನಗಳಲ್ಲಿ ಕಳ್ಳತನ ಮಾಡಿದರೂ ದೇವರು ದಂಡಿಸುವುದಿಲ್ಲ. ಏಕೆ?*

ನಿಮ್ಮ ದೊಡ್ಡಮಗ ತನ್ನ ತಮ್ಮನ ಹೊಲದಿಂದ ಹಿಡಿ ಮಣ್ಣು ಕದ್ದರೆ ನೀವು ದಂಡಿಸುವಿರೆ? ದೇವನ ಲೆಕ್ಕದಲ್ಲಿ ಸಕಲ ಐಶ್ವರ್ಯವೂ ಮಣ್ಣೇ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪುಢಾರಿಗಳ ಸ್ವಾಗತಕ್ಕೆ ನಿಂಬೆಹಣ್ಣೇಕೆ?*

'ಹುಳಿ ನಿಮ್ಮ ಮನೆಯಲ್ಲೇ ಹಿಂಡಿಕೊಳ್ಳಿ; ಇಲ್ಲಿ ಬೇಡ' ಎಂದು ಸೂಚಿಸಲು.

ಮುರಲೀಧರ ಕುಲಕರ್ಣಿ, ಬೀದರ್

*ನೀರು ಮತ್ತು ಬೀರ್; ಇವುಗಳಿಗೆ ಇರುವ ವ್ಯತ್ಯಾಸವೇನು?*

ಹಿಂದಿನ ಕಾಲದಲ್ಲಿ ವ್ಯತ್ಯಾಸವಿತ್ತು. ಈಗಿನ ಮಾಲಿನ್ಯಕಾಲದಲ್ಲಿ ವ್ಯತ್ಯಾಸವಿಲ್ಲ ಎರಡರಲ್ಲೂ ನೊರೆ, ವಾಸನೆ.

ರತ್ನಜ, ಮೈಸೂರು

*ರಾಂಜಿ, ನಿಮಗೆ ಜ್ಞಾನಪೀಠ ಪ್ರಶಸ್ತಿ ಕೊಟ್ಟರೆ.....?*

ಪೀಠ, ಪ್ರಶಸ್ತಿಗಳನ್ನು ನೀವೇ ಇಟ್ಟುಕೊಳ್ಳಿ; ನನಗೆ ಜ್ಞಾನವೊಂದೇ ಸಾಕು ಎನ್ನುತ್ತೇನೆ.

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ

*ಭೂಮಿಯೊಳಗಿನ ನಿಧಿಯನ್ನು ಪಡೆಯಲು ಮಾನವನನ್ನು ಬಲಿ ಕೊಡುವುದು ಏಕೆ?*

ಬೆಲೆಬಾಳುವ ಜರತಾರಿ ನೀಡಿ ಸ್ಟೀಲ್ ಪಾತ್ರೆ ಕೊಳ್ಳುವುದು ಮನುಜನ ಗುಣ!

ಸಿಹಿಮೊಗೆ ರಮೇಶ್, ಮೈಸೂರು

*ಬಿಗ್‌ಬಾಸ್ ಕಾರ್ಯಕ್ರಮದಿಂದ ಸಮಾಜಕ್ಕೆ ಸಂದೇಶವೇನು?*

ಯಾವುದಕ್ಕೂ ಪ್ರಯೋಜನ ಇಲ್ಲದವರನ್ನು ಇಂತಹ ಒಂದು ಮನೆಯಲ್ಲಿ ಕೂಡಿಹಾಕಿ ಎಂದು.

ಬೂಕನಕೆರೆ ವಿಜೇಂದ್ರ, ಮೈಸೂರು

*ಯಾವಾಗಲೂ ಛತ್ರಿಯನ್ನು ಜೊತೆಯಲ್ಲೇ ಇಟ್ಟುಕೊಂಡು ತಿರುಗಾಡುವ ಹೆಂಗಸನ್ನು ಏನೆಂದು ಕರೆಯಬಹುದು?*

ಛತ್ರಿಯ ಪತ್ನಿ!

ಕೆ.ಜಿ. ಶೇಖರಪ್ಪ, ಅರಸೀಕೆರೆ

*ಅಸತ್ಯವನ್ನೇ ನುಡಿದು ಬದುಕುವವರಿಗೆ ನಿಮ್ಮ ಹಿತನುಡಿಯೇನು?*

ಸುಳ್ಳನ್ನು ಬಿಡಲು ಆಗುವುದೇ ಇಲ್ಲವಾದರೆ ಪರೋಪಕಾರಕ್ಕಾಗಿ ಬಳಸಿ, ಪಾಪಕ್ಕಲ್ಲ.

## ಬಹುಮಾನಿತ ಪ್ರಶ್ನೆ

ಸುಮಾ ರಮೇಶ್, ಹಾಸನ

*ವಾಸ್ತುವಿಗಾಗಿ ಸಾವಿರಾರು ಸುರಿದು, ಸೊಪ್ಪಿನವಳೊಡನೆ ಒಂದು ರೂಪಾಯಿಗೆ ಚೌಕಾಸಿ ಮಾಡುವರಲ್ಲಾ...?*

ಸರಿಯೇ; ಅಡಿಗೆಗೆ ಸೊಪ್ಪು ಹಾಕದಿದ್ದರೂ ನಡೆಯುತ್ತದೆ; ಆದರೆ ವಾಸ್ತುವಿನ ಭಯಕ್ಕೆ ಸೊಪ್ಪು ಹಾಕಲೇಬೇಕಲ್ಲ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಚುನಾವಣಾ ಸಮಯದಲ್ಲಿ ಪ್ರಜೆಗಳೇ ಪ್ರಭುಗಳು ಎನ್ನುವ ರಾಜಕಾರಣಿಗಳು ನಂತರ ಅದನ್ನು ಮರೆಯುವುದು ಏಕೆ?*

ಹೊಟ್ಟೆಬಿರಿಯ ಊಟವಾದಮೇಲೆ ಆಪೋಶನದ ಮಂತ್ರದ ಹಂಗೇಕೆ!

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಅಳಿಯನನ್ನು ದೀಪಾವಳಿಗೆ ಕರೆಯುವ ಸಂಪ್ರದಾಯ ಮರೆಯಾಗುತ್ತಿದೆಯಲ್ಲಾ...?*

ಈಗಲೂ ಕರೆಯುತ್ತಾರೆ. ಆದರೆ ಚತುರ್ದಶಿಯಿಂದ ಪಾಡ್ಯಮಿಯವರೆಗೆ ಟ್ರಾಫಿಕ್ ಜ್ಯಾಮ್ ಇರುವುದರಿಂದ ಬರಲಾಗುತ್ತಿಲ್ಲವಷ್ಟೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

*ಆಟೋ/ಟ್ಯಾಕ್ಸಿ ಹಿಂಭಾಗಗಳಲ್ಲಿ ಅಪ್ಪನ/ಅಮ್ಮನ/ಭಾವನ ಕೊಡುಗೆ ಎಂದಿರುತ್ತದೆ; ಹೆಂಡತಿಯ ಕೃಪೆ ಎಂದೇಕೆ ಇರುವುದಿಲ್ಲ?*




ಹೆಂಡತಿಗೆ ಗಂಡ ನೇರವಾದ ದಿಕ್ಕಿನಲ್ಲಿ ಸಾಗುವುದೇ ಇಷ್ಟ; ಅಡ್ಡಾದಿಡ್ಡಿಯಲ್ಲ.

ಟಿ. ಪ್ರಸನ್ನ, ದಾವಣಗೆರೆ

*ಮೊದಲ ರಾತ್ರಿ ಹೊಸ ಮದುಮಕ್ಕಳು ಹಾಲು ಬೈಟೂ ಮಾಡಲೇಬೇಕಾ?*

ಛಿಡೆ ಬಿಡಬೇಕಲ್ಲ! ಎಂಜಲು ತರುವ ಸಾಮೀಪ್ಯವನ್ನು ಏಂಜಲ್ಲೂ ತರಲಾರಳಂತೆ!

ಎಸ್.ಎನ್. ಮಹಾಬಲರಾವ್, ಅಗ್ರಹಾರ

*ಸುಖ ಸಿಗುತ್ತಿದೆ. ಸಂತೋಷ ಸಿಗುತ್ತಿಲ್ಲವಲ್ಲಾ...?*

ತಿಳಿಯಿತು. ಅದು ವಾಮಮಾರ್ಗದಲ್ಲಿ ಪಡೆದ ಸುಖ.

■ ರಾಮ್